1	2	3	4	5
13.	Mangalore (D.K)	1867	757	579
14.	Kolar	1628	529	501
15.	Mandya	897	460	312
16.	Mysore	3327	1051	834
17.	Raichur	1432	502	316
18.	Shimoga	1509	501	378
19.	Tumkur	946	942	748
20.	Bangalore (R)	1332	853	719
21.	Bagalkote	-	-	217
22.	Chamarajanagar	-	-	169
23.	Davanagere	-	-	268
24.	Gadag	-	-	253
25.	Haveri	-	-	145
26.	Koppal	-	-	99
27.	Udupi	-	-	285
	Total	**34402**	**13422**	**12096**

ಸ್ವಯಂ ಉದ್ಯೋಗ ಯೋಜನೆಯ ನಿರುದ್ಯೋಗಿಗಳು

393 - ಶ್ರೀ ಕಟ್ಟ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೇಂದ್ರ ಸರ್ಕಾರದಿಂದ ಜಾರಿಗೆ ತಂದಿರುವ ಸ್ವಯಂ ಉದ್ಯೋಗ ಯೋಜನೆಯ ವಿವರ ಮತ್ತು ಇದರ ಪ್ರಯೋಜನ ವಿವರ ಮತ್ತು ಇದರ ಪ್ರಯೋಜನ ಪಡೆದ ನಿರುದ್ಯೋಗಿಗಳ ವಿವರ ನೀಡುವುದು?*

ಆ) *ಸರ್ಕಾರ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಮೀಸಲಿಟ್ಟಿರುವ ಆಯವ್ಯಯದ ಪೂರ್ಣ ವಿವರಗಳನ್ನು ನೀಡುವುದು?*

ಇ) *2000-2001ನೇ ಸಾಲಿನ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕಾರ್ಯ ಯೋಜನೆಗಳೇನು, ವಿವರ ನೀಡುವುದು?*

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಮಂತ್ರಿಗಳು) :

ಅ) ಪ್ರಧಾನ ಮಂತ್ರಿಗಳ ರೋಜಗಾರ್ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, 1993 ಅಕ್ಟೋಬರ್‌ರಿಂದ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. ಯೋಜನೆಯ ವಿವರಗಳನ್ನೊಳಗೊಂಡ ಕೈಪಿಡಿಯನ್ನು ಲಗತ್ತಿಸಿದೆ. ಪ್ರಯೋಜನ ಪಡೆದ ಫಲಾನುಭವಿಗಳ ವಿವರಗಳು ಈ ಕೆಳಕಂಡಂತಿದೆ.

ವರ್ಷ	ಮಂಜೂರಾದ ಅರ್ಜಿಗಳ		ಹಣ ಬಿಡುಗಡೆಯಾದ ಅರ್ಜಿಗಳ	
	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
93-94	1919	1008.73	1322	650.79
94-95	13759	6527.78	11248	4945.28
95-96	17000	8352.67	14157	7168.28
96-97	17363	9293.17	14556	7641.10
97-98	18570	10276.98	14510	8016.10
98-99	19413	10238.64	15875	8920.13
99-00	14886	9265.34	3261	2023.40

ಆ) ಸರ್ಕಾರವು 1999-2000ನೇ ಸಾಲಿನಲ್ಲಿ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಗೆ ಒಟ್ಟು 139.65 ಕೋಟಿಗಳನ್ನು ಒದಗಿಸಿರುತ್ತದೆ. ಆ ಮೊತ್ತದಲ್ಲಿ ರೂ. 58.85 ಕೋಟಿಗಳನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಹಾಗೂ 80.80 ಕೋಟಿ ರೂ.ಗಳನ್ನು ಗ್ರಾಮೀಣ ಮತ್ತ ಸಣ್ಣ ಪ್ರಮಾಣದ ಕೈಗಾರಿಕಾ ವಲಯಕ್ಕೆ ಹಂಚಲಾಗಿದೆ.

ಇ) 1999-2000ನೇ ಸಾಲಿನ ಮುಂದುವರೆದ ಯೋಜನೆಗಳನ್ನು 2000-2001ನೇ ಸಾಲಿನಲ್ಲಿ ಮುಂದುವರೆಸಲಾಗಿದೆ. ಆಯವ್ಯಯದ ಮಂಡನೆಯ ನಂತರ ಯೋಜನಾವಾರು ಹಣದ ಹಂಚಿಕೆಯ ವಿವರಗಳನನು ತಿಳಿಯಲಾಗುವುದು.

ಅನುಬಂಧ - I

ಕರ್ನಾಟಕ ಸರ್ಕಾರ

ಸ್ವಉದ್ಯೋಗವೇ ನಿರುದ್ಯೋಗ ಸಮಸ್ಯೆಗೆ ಪರಿಹಾರ

ಪ್ರಧಾನ ಮಂತ್ರಿಯವರ ರೋಜಗಾರ್ ಯೋಜನೆ

ಈಗ ಷರತ್ತುಗಳನ್ನು ಸಡಿಲಗೊಳಿಸಿದೆ

ಸ್ವಂತ ಉದ್ಯೋಗ ಸ್ಥಾಪಿಸಿ ಸುಖ ಸಮೃದ್ಧಿ ಸಾಧಿಸಿ

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಅರ್ಹತೆ

ಈ ಕೆಳಗಿನ ಷರತ್ತುಗಳನ್ನು ಪೂರೈಸುವ ದೇಶದ ಗ್ರಾಮೀಣ ಅಥವಾ ನಗರ ಪ್ರದೇಶದ ಯಾವುದೇ ಭಾಗದಲ್ಲಿ ವಾಸವಾಗಿರುವ ವಿದ್ಯಾವಂತ ನಿರುದ್ಯೋಗಿ ವ್ಯಕ್ತಿ.

i) **ವಯಸ್ಸು** : 18 ರಿಂದ 35 ವರ್ಷಗಳ ವಿದ್ಯಾವಂತ ನಿರುದ್ಯೋಗಿಗಳು. ಪ.ಜಾ./ಪ.ಪಂ.ಕ್ಕೆ ಸೇರಿದವರು, ಮಾಜಿ ಸೈನಿಕರು, ಅಂಗವಿಕಲರು ಮತ್ತು ಮಹಿಳೆಯರಿಗೆ 10 ವರ್ಷಗಳ ರಿಯಾಯಿತಿ.

ii) **ವಿದ್ಯಾರ್ಹತೆ** : 8ನೇ ತರಗತಿ ತೇರ್ಗಡೆಯಾಗಿರಬೇಕು. ಸರ್ಕಾರಿ ಮಾನ್ಯತೆ /ಅನುಮತಿ ಪಡೆದ ಸಂಸ್ಥೆಯಲ್ಲಿ 6 ತಿಂಗಳ ವೃತ್ತಿತರಬೇತಿ ಪಡೆದವರಿಗೆ ಆದ್ಯತೆ.

iii) **ನಿವಾಸ** : ಆ ಪ್ರದೇಶದಲ್ಲಿ ಕನಿಷ್ಠ 3 ವರ್ಷಗಳ ಖಾಯಂ ನಿವಾಸಿಯಾಗಿರಬೇಕು.

iv) **ಕುಟುಂಬದ ಆದಾಯ** : ವಾರ್ಷಿಕ ಆದಾಯ 24,000 ರೂ. ಒಳಗಿರಬೇಕು. ಈ ಉದ್ದೇಶಕ್ಕೆ ಕುಟುಂಬ ಎಂದರೆ ಫಲಾನುಭವಿಯ ಗಂಡ/ಹೆಂಡತಿ ಅಥವಾ ತಂದೆ ತಾಯಿಗಳು ಎಂದು ಅರ್ಥ. ಕುಟುಂಬದ ಆದಾಯದಲ್ಲಿ ಮಜೂರಿಗಳು, ಸಂಬಳ, ಪಿಂಚಣಿ, ಕೃಷಿ, ವ್ಯಾಪಾರ, ಬಾಡಿಗೆ, ವರಮಾನ ಮುಂತಾದ ಎಲ್ಲಾ ಮೂಲಗಳಿಂದ ಬರುವ ಆದಾಯವೂ ಒಳಗೊಳ್ಳುತ್ತದೆ.

v) **ಸುಸ್ತಿದಾರ** : ಯಾವುದೇ ರಾಷ್ಟ್ರೀಕೃತ ಬ್ಯಾಂಕು / ಹಣಕಾಸು ಸಂಸ್ಥೆ : ಸಹಕಾರಿ ಬ್ಯಾಂಕು ಇವುಗಳ ಸುಸ್ತಿದಾರನಾಗಿರಬಾರದು. ವ್ಯಕ್ತಿಯು ಬೇರಾವುದೇ ಸರ್ಕಾರಿ ಯೋಜನೆಗಳಿಗೆ ಸಂಬಂಧಿಸಿದ ಧನ ಸಹಾಯ ಈಗಾಗಲೇ ಪಡೆದಿದ್ದಲ್ಲಿ ಅಂತಹ ವ್ಯಕ್ತಿ ಈ ಯೋಜನೆಗೆ ಅರ್ಹರಾಗಿರುವುದಿಲ್ಲ.

ಕಾದಿರಿಸುವಿಕೆ : ಪ.ಜಾ./ಪ.ಪಂ.ಗಳಿಗೆ 22.5%, ಹಿಂದುಳಿದ ವರ್ಗಗಳಿಗೆ 27%, ಮಹಿಳೆಯರಿಗೆ 33.33% ಅಲ್ಪಸಂಖ್ಯಾತರಿಗೆ 12% ಮತ್ತು ಅಂಗವಿಕಲರಿಗೆ 3%.

ಒಳಗೊಳ್ಳಲಾದ ಚಟುವಟಿಕೆಗಳು : ಉದ್ದಿಮೆದಾರರು ಯಾವುದೇ ಉದ್ಯಮ, ಅಂದರೆ ಕೈಗಾರಿಕೆ, ಸೇವೆ ಅಥವಾ ವ್ಯಾಪಾರ ಮುಂತಾದವುಗಳಿಗಾಗಿ ಸಾಲ ಪಡೆಯಬಹುದಾಗಿದೆ. ನೇರವಾಗಿ ಕೃಷಿವಲಯಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಉದಾ: ಬೇಸಾಯ, ಗೊಬ್ಬರ ಖರೀದಿಗಳನ್ನು ಬಿಟ್ಟು ಬೇರಾವುದೇ ಕೈಗಾರಿಕೆ, ಸೇವೆ ಅಥವಾ ವ್ಯಾಪಾರವನ್ನೊಳಗಂಡ ಆರ್ಥಿಕ ಚಟುವಟಿಕೆಗಳು.

ಫಲಾನುಭವಿಯು ಭರಿಸಬೇಕಾದ ವಂತಿಗೆ ಹಣ : ಫಲಾನುಭವಿಯು ಯೋಜನಾ ವೆಚ್ಚದಲ್ಲಿ ಶೇ 5 ರಿಂದ ಶೇ 16.25 ರಷ್ಟು ಹಣವನ್ನು ವಂತಿಗೆ ಹಣವಾಗಿ ಭರಿಸಬೇಕು. ಸರಕಾರದಿಂದ ದೊರಕುವ ಸಹಾಯಧನ ಮತ್ತು ವಂತಿಗೆ ಹಣವು ಒಟ್ಟಾಗಿ ಯೋಜನಾ ವೆಚ್ಚದ ಶೇ 20 ರಷ್ಟಿರಬೇಕಾಗುವುದು.

ಯೋಜನಾ ವೆಚ್ಚ : ಒಬ್ಬ ಅರ್ಜಿದಾರನಿಗೆ ವ್ಯಾಪಾರೋದ್ಯಮಕ್ಕೆ ರೂ. 1 ಲಕ್ಷ ಮತ್ತು ಕೈಗಾರಿಕೆ ಹಾಗೂ ಸೇವಾ ಚಟುವಟಿಕೆಗಳಿಗೆ ರೂ. 2 ಲಕ್ಷಗಳ ಗರಿಷ್ಟ ಸಾಲ ಸೌಲಭ್ಯಕ್ಕೆ ಅವಕಾಶವಿರುತ್ತದೆ. ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಗಳು ಪಾಲುದಾರಿಕೆಯಲ್ಲಿ ಸೇರಿದರೆ ರೂ. 10 ಲಕ್ಷ ದವರೆಗಿನ ಯೋಜನೆಗಳನ್ನು ಪರಿಗಣಿಸಲಾಗುವುದು.

ಬ್ಯಾಂಕ್ ಸಾಲಗಳಿಗೆ ಖಾತರಿ : 1 ಲಕ್ಷ ರೂ.ವರೆಗಿನ ಯೋಜನೆಗಳಿಗೆ ಯಾವುದೇ ಪೂರಕ ಜಾಮೀನು ನೀಡುವ ಅಗತ್ಯವಿಲ್ಲ. ಪಾಲುದಾರಿಕೆ ಯೋಜನೆಯಲ್ಲೂ ಸಹ ಪ್ರತಿ ವ್ಯಕ್ತಿಗೆ 1 ಲಕ್ಷ ರೂ.ವರೆಗೆ ಪೂರಕ ಜಾಮೀನು ಅಗತ್ಯವಿರುವುದಿಲ್ಲ.

ಬಡ್ಡಿದರಗಳು ಮತ್ತು ಮರುಪಾವತಿ : ಸಾಲ ಮರುಪಾವತಿಗೆ ಪ್ರಾರಂಭಿಕ ಸ್ಥಗಿತದ ಅವಧಿಯು ಯೋಜನೆಯನ್ನು ಅವಲಂಬಿಸುತ್ತದೆ. ನಂತರದ ಮರುಪಾವತಿಯ ಅವಧಿಯು 3 ರಿಂದ 7 ವರ್ಷಗಳ ಅಂತರದಲ್ಲಿ ನಿಗದಿಪಡಿಸಲಾಗಿರುತ್ತದೆ.

ಗುರಿ ನಿಗದಿಪಡಿಸುವಿಕೆ : ಜನಸಂಖ್ಯೆ ಮತ್ತು ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆಯ ಆಧಾರದ ಮೇಲೆ ಗುರಿ ಅವಲಂಬಿಸಿರುತ್ತದೆ. ಇದರೊಂದಿಗೆ ಹಿಂದೆ ಮಂಜೂರಾದ ಸಾಲಗಳ ಮರುಪಾವತಿಯನ್ನೂ ಸಹ ಅವಲಂಬಿಸಿರುತ್ತದೆ.

ಸಹಾಯಧನ : ಭಾರತ ಸರ್ಕಾರವು ಪ್ರತಿ ಉದ್ದಮೆದಾರನಿಗೆ 7,500 ರೂ. ಗಳ ಮಿತಿಗೆ ಒಳಪಟ್ಟಂತೆ ಯೋಜನಾ ವೆಚ್ಚದ ಶೇ. 15ರಷ್ಟು ಸಹಾಯಧನವನ್ನು ಒದಗಿಸುವುದು. ಒಬ್ಬರಿಗಿಂತ ಹೆಚ್ಚು ಉದ್ದಿಮೆದಾರರು ಒಟ್ಟಾಗಿ ಸೇರಿ ಪಾಲುದಾರಿಕೆಯಲ್ಲಿ ಯೋಜನೆಯನ್ನು ಆರಂಭಿಸಿದರೆ, ಪ್ರತಿ ಪಾಲುದಾರನಿಗೆ 7,500 ರೂ.ಗಳ ಪರಿಮಿತಿಗೆ ಒಳಪಟ್ಟು ಯೋಜನಾ ವೆಚ್ಚದಲ್ಲಿ ಶೇ. 15ರ ದರದಲ್ಲಿ ಪ್ರತಿ ಪಾಲುದಾರನಿಗೆ ಸಹಾಯಧನವನ್ನು ಪ್ರತ್ಯೇಕವಾಗಿ ಒದಗಿಸಲಾಗುವುದು.

ತರಬೇತಿ : ಕಾರ್ಯಯೋಜನೆಯಲ್ಲಿ ಉದ್ದಿಮೆದಾರರಿಗೆ ಸಾಲ ಮಂಜೂರು ಮಾಡಿದ ನಂತರ ಕಡ್ಡಾಯವಾಗಿ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ನೀಡಲು ಉದ್ದೇಶಿಸಲಾಗಿದೆ. ಕೈಗಾರಿಕಾ ತರಬೇತಿಯ ಅವಧಿಯು 15-20 ದಿನಗಳಿಗೆ ಮತ್ತು ಸೇವಾ/ವ್ಯಾಪಾರದ ತರಬೇತಿಯ ಅವಧಿಯು

7-10 ದಿನಗಳಿಗೆ ನೀಡಲಾಗುವುದು. ತರಬೇತಿ ವೆಚ್ಚವು ಪ್ರತಿಫಲಾನುಭವಿಗೆ ಕೈಗಾರಿಕಾ ಕ್ಷೇತ್ರದಲ್ಲಿ ರೂ. 1,000/- (ರೂ.300/- ಶಿಕ್ಷಣಾ ಭತ್ಯೆ ಸೇರಿ) ಹಾಗೂ ಸೇವಾ ಉದ್ಯಮ ಮತ್ತು ವ್ಯಾಪಾರ ಕ್ಷೇತ್ರದಲ್ಲಿ 500/- (ರೂ. 150/- ಶಿಕ್ಷಣಾ ಭತ್ಯೆ ಸೇರಿ) ಆಗಿರುತ್ತದೆ.

ಅನುಷ್ಠಾನ : ಜಿಲ್ಲಾ ಕೈಗಾರಿಕಾ ಕೇಂದ್ರಗಳು ಮತ್ತು ನಿರ್ದೇಶನಾಲಯ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ಬ್ಯಾಂಕ್‌ಗಳ ಮುಖಾಂತರವಾಗಿ ಯೋಜನೆಯನ್ನು ಅನುಷ್ಠಾನಗೊಳಿಸುವುದು.

ಜಿಲ್ಲಾಮಟ್ಟದ ಕಾರ್ಯದಳ : ಜಿಲ್ಲಾಮಟ್ಟದ ಕಾರ್ಯದಳದಲ್ಲಿ (Task Force) ಜಿಲ್ಲಾ ಕೈಗಾರಿಕಾ ಕೇಂದ್ರದ ಹಿರಿಯ ಅಧಿಕಾರಿಯಾದ ಜಂಟಿ ನಿರ್ದೇಶಕರು ಅಧ್ಯಕ್ಷರಾಗಿರುತ್ತಾರೆ. ಮತ್ತು ಕಾರ್ಯದಳದ ಇತರ ಸದಸ್ಯರುಗಳ ಈ ಕೆಳಕಂಡವರಾಗಿರುತ್ತಾರೆ;

- ★ ಲೀಡ್ ಬ್ಯಾಂಕ್
- ★ ಎರಡು ಪ್ರಮುಖ ಬ್ಯಾಂಕ್‌ಗಳ ಪ್ರತಿನಿಧಿಗಳು
- ★ ಜಿಲ್ಲಾ ಉದ್ಯೋಗ ಅಧಿಕಾರಿ
- ★ ಸಣ್ಣ ಕೈಗಾರಿಕಾ ಸೇವಾ ಸಂಸ್ಥೆ ಮತ್ತು ಜಿಲ್ಲಾಪಂಚಾಯಿತಿಯಿಂದ ಒಬ್ಬರು ಪ್ರತಿನಿಧಿಗಳು
- ★ ಉಪನಿರ್ದೇಶಕರು ಜಿ.ಕೈ.ಕೆ. ಇವರು ಸದಸ್ಯ ಕಾರ್ಯದರ್ಶಿಗಳಾಗುವರು
- ★ ಅಧ್ಯಕ್ಷರು, ಖ್ಯಾತ ಸರ್ಕಾರೇತರ ಸಂಸ್ಥೆಗಳಿಗೆ ಒಬ್ಬರು ಅಥವಾ ಹೆಚ್ಚಿನ ಸದಸ್ಯರುಗಳನ್ನು ಸಹ ಸದಸ್ಯರಾಗಿ ಆಯ್ಕೆಮಾಡಬಹುದು.

ಕಾರ್ಯಯೋಜನೆಯ ಅನುಷ್ಠಾನವು ಫಲಾನುಭವಿಗಳ ಗುರುತಿಸುವಿಕೆ, ನಿರ್ದಿಷ್ಟ ಉಪವೃತ್ತಿಗಳ ಆಯ್ಕೆ, ಫಲಾನುಭವಿಗಳಿಂದ ಅಗತ್ಯವಾದ ಪೂರಕ ವ್ಯವಸ್ಥೆಯ ಗುರುತಿಸುವಿಕೆ, ಬೆಂಗಾವಲಿನ ಸೇವೆಗಳು, ಮತ್ತು ಕೈಗಾರಿಕೆ, ವ್ಯಾಪಾರ ಮತ್ತು ಸೇವಾ ವಲಯದೊಂದಿಗೆ ಸಂಬಂಧವಿರುವ ಬ್ಯಾಂಕುಗಳು ಮತ್ತು ಇತರ ಸ್ಥಳೀಯ ಏಜೆನ್ಸಿಗಳೊಂದಿಗೆ ನಿಕಟ ಸಂಪರ್ಕ ಇವುಗಳನ್ನು ಒಳಗೊಳ್ಳುತ್ತವೆ.

ಕಾರ್ಯದಳವು (i) ಉದ್ದಿಮೆದಾರರನ್ನು ಪ್ರೇರೇಪಿಸುವುದು ಮತ್ತು ಅವರನ್ನು ಆಯ್ಕೆ ಮಾಡುವುದು (ii) ಕೈಗಾರಿಕಾ ಸೇವಾ ಮತ್ತು ವ್ಯಾಪಾರ ವಲಯಗಳನ್ನು ಗುರುತಿಸುವುದು ಮತ್ತು ಕಾರ್ಯಯೋಜನೆಗಳನ್ನು ತಯಾರಿಸುವುದು (iii) ಉಪವೃತ್ತಿಗಳು : ಚಟುವಟಿಕೆಗಳ ನಿರ್ಧರಿಸುವಿಕೆ (iv) ಸಾಲವನ್ನು ಶಿಫಾರಸ್ಸು ಮಾಡುವುದು (v) ಸಂಬಂಧಪಟ್ಟ ಪ್ರಾಧಿಕಾರಗಳಿಂದ ಅವಶ್ಯವಾದ ಒಪ್ಪಿಗೆಯನ್ನು ತ್ವರಿತವಾಗಿ ಪಡೆಯುವುದು- ಇವುಗಳಿಗೆ ಜವಾಬ್ದಾರಿಯಾಗಿರುತ್ತದೆ.

ತಾಲ್ಲೂಕು ಮಟ್ಟದ ಕಾರ್ಯದಳ : ಪಿ.ಎಂ.ಆರ್. ವೈ. ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಉದ್ದೇಶದಿಂದ ತಾಲ್ಲೂಕು ಮಟ್ಟದ ಕಾರ್ಯದಳ ಸಮಿತಿಯನ್ನು ರಚಿಸಲಾಗಿದೆ.

1.	ಜಂಟಿ ನಿರ್ದೇಶಕರು, ಡಿಐಸಿ	-	ಅಧ್ಯಕ್ಷರು
2.	ಅಸಿಸ್ಟೆಂಟ್ ಕಮೀಷನರ್/ಪ್ರತಿನಿಧಿ	-	ಸದಸ್ಯರು

3. ತಾಲ್ಲೂಕು ಅಭಿವೃದ್ಧಿ ಅಧಿಕಾರಿ (ಬಿ.ಡಿ.ಓ) - ಸದಸ್ಯರು
4. ಲೀಡ್ ಬ್ಯಾಂಕ್ ಅಧಿಕಾರಿ - ಸದಸ್ಯರು
5. ಕ್ಷೇತ್ರದಲ್ಲಿ ಭಾಗವಹಿಸುವ ಎಲ್ಲಾ ಬ್ಯಾಂಕುಗಳು - ಸದಸ್ಯರು
6. ಜಿಲ್ಲಾಉದ್ಯೋಗ ವಿನಿಮಯ ಅಧಿಕಾರಿ/ಪ್ರತಿನಿಧಿ - ಸದಸ್ಯರು
7. ಜಿಲ್ಲಾ ಪಂಚಾಯತ್‌ನ ಅಧಿಕಾರಿ - ಸದಸ್ಯರು
8. ಜಿಲ್ಲಾಸಮಾಜ ಕಲ್ಯಾಣ ಅಧಿಕಾರಿ/ಪ್ರತಿನಿಧಿ - ಸದಸ್ಯರು
9. ಜಂಟಿ ನಿರ್ದೇಶಕರು, ಡಿಐಸಿ ಇವರಿಂದ ಲಭ್ಯವಿದ್ದಲ್ಲಿ ಎನ್‌ಜಿಓ ಯಿಂದ 1 ಅಥವಾ 2 ಸದಸ್ಯರ ಸೇರ್ಪಡೆ - ಸದಸ್ಯರು
10. ಉಪ ನಿರ್ದೇಶಕರು (ಸಾಲ) ಜಿ.ಕೈ.ಕೇ. - ಸದಸ್ಯ- ಕಾರ್ಯದರ್ಶಿ

ತಾಲ್ಲೂಕು ಮಟ್ಟದಲ್ಲಿ ಹೆಚ್ಚಿನ ಪರಿಶೀಲನೆ ಹಾಗೂ ಬ್ಯಾಂಕುಗಳ ಭಾಗವಹಿಸುವಿಕೆಯಿಂದಾಗಿ ಅಭ್ಯರ್ಥಿಗಳ ಆಯ್ಕೆಯಲ್ಲಿ ಉತ್ತಮ ಮಟ್ಟ ಕಾಪಾಡಿಕೊಳ್ಳಲು ತಾಲ್ಲೂಕು ಕಾರ್ಯದಳವನ್ನು ರಚಿಸಲಾಗಿರುತ್ತದೆ.

ಚಟುವಟಿಕೆಗಳ ಪಟ್ಟಿ (ಉದಾಹರಣೆಗಾಗಿ)

ಕೆಲವೊಂದು ಸೂಚಿಸಿದ ಕೈಗಾರಿಕಾ ವಲಯ :

★ ಅರಯಂತ್ರ: ಮರಕೊಯ್ಯುವ ಮಿಲ್

★ ಬೇಸನ್ ಮಿಲ್:ಅಟ್ಟಾಚಕ್ಕಿ: ಮಸಾಲ ಚಕ್ಕಿ

★ ಎಣ್ಣೆಗಿರಣಿ

★ ಕೂಲರ್‌ಬಾಡಿ ಮ್ಯಾನ್ಯುಫ್ಯಾಕ್ಚರಿಂಗ್: ಕಬ್ಬಿಣದ ಸಾಮಾನುಗಳು: ಕೃಷಿ ಉಪಕರಣಗಳು : ವೈರ್‌ಮೆಷ್ : ಹಿತ್ತಾಳೆಲೋಹ : ಉಕ್ಕಿನ ಪೀಠೋಪಕರಣ: ಗೇಟ್ ಮತ್ತು ಗ್ರಿಲ್

★ ಯುಟಿನ್ಸಿಲ್ ಪಾಲಿಷಿಂಗ್: ರೋಲಿಂಗ್ ಷಟ್ಟರ್ :ಪ್ಲಾಸ್ಟಿಕ್ ವಸ್ತುಗಳು: ರಬ್ಬರ್ ಉತ್ಪನ್ನಗಳು: ಬಾಬಿನ್ ಕಾರ್ಖಾನೆ: ಕುಕ್ಕರ್ ಹಿಡಿಗಳು / ಪೋಟೋ ಫ್ರೇಂಗಳು

★ ಪಾದರಕ್ಷೆ ತಯಾರಿಸುವುದು: ಚರ್ಮದ ವಸ್ತುಗಳು / ಸೀಟ್‌ಕವರ್

★ ಉಡುಪುಗಳು : ಕೈಮಗ್ಗಗಳು : ಬೊಂಬೆಗಳ ತಯಾರಿಕೆ : ಕರಕುಶಲ ವಸ್ತುಗಳು : ಪರದೆಪಟ್ಟಿ : ಬಟ್ಟೆ ಪ್ರಿಂಟಿಂಗ್ · ಸೀರೆಯ ಫಾಲ್ ತಯಾರಿಸುವುದು : ಕಸೂತಿ : ಥ್ರೆಡ್ ಬಾಲ್‌ನೆಟ್ಟಿಂಗ್

★ ಪವರ್ ಪ್ರೆಸ್:ಲೇತ್

★ ಮರದ ವಸ್ತುಗಳು : ಪೀಠೋಪಕರಣ ತಯಾರಿಕೆ

★ ಕಾಗದ ಉತ್ಪನ್ನಗಳು : ಚೀಲಗಳು : ಮುದ್ರಣಾಲಯ : ರಟ್ಟಿನಪಟ್ಟಿಗಳು

★ ಸುಣ್ಣದ ಗೂಡು : ಮರದ ಇದ್ದಿಲು ತಯಾರಿಕೆ

★ ಗಾಜಿನ ಕಾಮಗಾರಿಗಳು : ಕನ್ನಡದಗಾಜು

★ ವಿದ್ಯುತ್ ಉಪಕರಣಗಳು : ಸ್ವಿಚ್ ಬೋರ್ಡ್

★ ರಾಸಾಯನಿಕ ವಸ್ತುಗಳು : ಸಾಬೂನುಗಳು / ಡಿಟರ್ಜೆಂಟ್ ಭಾಗಗಳು : ಗ್ರೀಸ್ ತಯಾರಿಕೆ

★ ಆಟೋ ಬಿಡಿಭಾಗಗಳು: ಫಿಲ್ಟರ್:ಸ್ಪ್ರಿಂಗ್ ತಯಾರಿಕೆ : ಇಂಜೆಕ್ಟರ್ ನಾಜಲ್‌ಗಳು

★ ಮೇವಿನ ಮತ್ತು ಹೈನುಗಾರಿಕೆ ಉತ್ಪನ್ನಗಳು: ಹಾಲಿನ ಕೆನೆ: ತುಪ್ಪ : ಬೇಕರಿ : ಸೋಡಾನೀರು : ಐಲ್ ಮುರಮುರೆ: ಐಸ್‌ಕ್ಯಾಂಡಿ

★ ಫೋಟೋ ಲ್ಯಾಬ್‌ಗಳು

★ ಪೇಪರ್ ಕಪ್ಪುಗಳು ಮತ್ತು ತಟ್ಟೆಗಳು

★ ರೆಕ್ಸಿನ್ ಫೋಂ: ಚರ್ಮದ ಹೊದಿಕೆಗಳು ಮತ್ತು ಚೀಲಗಳು

★ ಸ್ಪೋರ್ಟ್ಸ್‌ನೆಟ್‌ಗಳು

★ ಬ್ಯಾಡ್‌ಮಿಂಟನ್ ಷಟಲ್‌ಕಾಕ್

★ ಸರ್ಜಿಕಲ್ ಬ್ಯಾಂಡೇಜ್

★ ಬಾಟಿಕ್ ಪ್ರಿಂಟಿಂಗ್

★ ಪೆಟ್ಟಿಕೋಟ್

★ ಹತ್ತಿಕಾಲುಚೀಲಗಳು

★ ಬ್ರೇಸಿಯರ್

★ ಹೋಲ್ಡ್‌ಆಲ್

★ ಬೋನ್‌ಮಿಲ್

★ ಚರ್ಮದ ಬೆಲ್ಟ್

★ ಟೈ

★ ಪೈಂಟ್ ಬ್ರಷ್

★ ಲೆನ್ಸ್‌ಗ್ರೈಂಡಿಂಗ್

★ ನಾಫ್ತಲಿನ್ ಬಾಲ್

★ ಟೊಮೇಟೋ ಕೆಚಪ್

★ ಫಿನೈಲ್

★ ರಬ್ಬರು ಕೈಗವಚಗಳು

★ ಕಬ್ಬಿಣದ ಮಂಚಗಳು

★ ಗೋಬರ್ ಗ್ಯಾಸ್ ಪ್ಲಾಂಟ್

★ ಟ್ಯೂಬ್‌ಲೈಟ್ ಪಟ್ಟಿ
★ ಟ್ರಾನ್ಸ್‌ಫಾರ್ಮರ್-ರೇಡಿಯೋ ಟಿ.ವಿ.
★ ಬೇಕ್‌ಲೈಟ್ ಆಕ್ಸೆಸೇರಿಸ್
★ ಅಗರಬತ್ತಿ ಕೈಗಾರಿಕೆ
★ ರಾಸಾಯನಿಕ ಕೈಗಾರಿಕೆ
★ ಟ್ರಕ್ ಬಾಡಿ ಬಿಲ್ಡಿಂಗ್
★ ಇಟ್ಟಿಗೆ ಕೈಗಾರಿಕೆ
★ ಕುಂಬಾರಿಕೆ
★ ಫೌಂಟನ್ ಮತ್ತು ಬಾಲ್‌ಪಾಯಿಂಟ್ ಪೆನ್
★ ಕಾರ್ಪೆಟ್ ಫ್ಯಾಬ್ರಿಕೇಷನ್
★ ಹಿತ್ತಾಳೆ ವಸ್ತುಗಳು
★ ನಂಕೀನ್
★ ಬಿದರಿನ ವಸ್ತುಗಳು
★ ಅಲಂಕಾರದ ವಸ್ತುಗಳು
★ ಎಲೆಕ್ಟ್ರಾನಿಕ್ಸ್
★ ಇಂಜಿನಿಯರಿಂಗ್ ವರ್ಕ್‌ಷಾಪ್
★ ಬುಕ್ ಬೈಂಡಿಂಗ್
★ ಹತ್ತಿ ಬಟ್ಟೆಯ ಚೀಲಗಳು
★ ಪ್ಲಾಸ್ಟರ್ ಆಫ್ ಪ್ಯಾರೀಸ್ ಮೂರ್ತಿಗಳು
★ ಟಿ.ವಿ. ಆಂಟೆನಾ
★ ಖಾಲಿ ವಿಡಿಯೋ ಕ್ಯಾಸೆಟ್‌ಗಳು
★ ಕ್ಯಾಸೆಟ್ ರೆಕಾರ್ಡಿಂಗ್
★ ಪ್ರಿಂಟೆಡ್ ಸರ್ಕ್ಯೂಟ್ ಬೋರ್ಡ್‌ಗಳು
★ ಮಿನಿಯೇಚರ್ ಬಲ್ಬ್‌ಗಳು
★ ಅಲಂಕಾರದ ಬಲ್ಬ್‌ಗಳು
★ ಟ್ಯೂಬ್ ಲೈಟ್ ಚೋಕ್
★ ನೈಟ್ ಲ್ಯಾಂಪ್
★ ಜಿ.ಐ. ವಾಷರ್‌ಗಳು
★ ಹೊಸ ಕ್ಲಾಂಪ್‌ಗಳು
★ ಟಿ.ವಿ.:ರೂಂ ಕೂಲರ್ ಸ್ಟ್ಯಾಂಡ್: ಟ್ರಾಲಿ

★ ಪ್ರೆಷರ್ ಸ್ಟೌವ್
★ ಸ್ಕ್ರೂಡ್ರೈವರ್ಸ್
★ ಹಾಥ್ ತೇಲಾ (ಕೈಗಾಡಿ)
★ ಅಲ್ಯೂಮಿನಿಯಂ ಹ್ಯಾಂಗರ್ಸ್
★ ಎತ್ತಿನ ಗಾಡಿಗಳ ಚಕ್ರಗಳು

ವ್ಯಾಪಾರ :

★ ಆಯುರ್ವೇದದ ವ್ಯಾಪಾರ :
★ ಹೋಮಿಯೋಪಥಿ ಔಷಧಿಗಳ ಅಂಗಡಿ
★ ಸೈಕಲ್ ಹೈಯರಿಂಗ್ ಷಾಪ್
★ ಸೈಕಲ್ ಅಂಗಡಿ
★ ಮೆರುಗು ವಸ್ತುಗಳ ಅಂಗಡಿ
★ ಕನ್ನಡಕದ ಅಂಗಡಿ
★ ಧಾನ್ಯದ ವ್ಯಾಪಾರ
★ ಜರಿ ವಸ್ತುಗಳು
★ ರಂಗಾಯಿ ಮತ್ತು ಛಾಪಾಯಿ ಅಂಗಡಿ
★ ಪುಸ್ತಕದ ಅಂಗಡಿ
★ ತಂಪು ಪಾನೀಯಗಳ ಅಂಗಡಿ
★ ಹಣ್ಣಿನ ರಸ : ಕಬ್ಬಿನ ಹಾಲು
★ ಎಣ್ಣೆ ಅಂಗಡಿ
★ ಸೀಮೆ ಎಣ್ಣೆ ಅಂಗಡಿ
★ ಕುಂಬಾರರ ಅಂಗಡಿ
★ ಬೀಜ ಭಂಡಾರ (ಬೀಜದ ಮಳಿಗೆ)
★ ಸ್ಕೂಟರ್ ಬಿಡಿ ಭಾಗಗಳ ಅಂಗಡಿ
★ ಪತಂಗ್ ಡೋರಿ ಅಂಗಡಿ
★ ಸುಣ್ಣಹಚ್ಚಲು ಬಳಸುವ ಸಾಮಗ್ರಿಗಳ ಅಂಗಡಿ
★ ಪೀಠೋಪಕರಣಗಳ ಅಂಗಡಿ
★ ಸ್ಟೀಲ್ ಕ್ರಾಕರಿ ಅಂಗಡಿ
★ ಪಾನ್‌ಮಸಲಾ, ಟೀ ಮತ್ತು ಕಾಫಿ ಅಂಗಡಿ
★ ವಿಜ್ಞಾನ ಸಲಕರಣೆಯ ಅಂಗಡಿ
★ ಪಾತ್ರೆ ಅಂಗಡಿ

★ ಟೆಂಟ್ ಹೌಸ್
★ ಉಣ್ಣೆ ಬಟ್ಟೆಗಳು
★ ವಿದ್ಯುಚ್ಛಕ್ತಿ ವಸ್ತುಗಳ ಮಳಿಗೆ
★ ಲೇಖನ ಸಾಮಗ್ರಿ ಮಳಿಗೆ
★ ಕಬ್ಬಿಣದ ಅಂಗಡಿ: ಕಬ್ಬಿಣದ ವಸ್ತುಗಳು: ಪೈಪ್ ಫಿಟ್ಟಿಂಗ್
★ ಕಟ್ಟಡ ಸಾಮಗ್ರಿ: ಸ್ಯಾನಿಟರಿ ಫಿಟ್ಟಿಂಗ್ ಮಳಿಗೆ
★ ಹಣ್ಣು ಮತ್ತು ತರಕಾರಿ ಅಂಗಡಿ
★ ಮಿಠಾಯಿ ಅಂಗಡಿ
★ ಪೀಠೋಪಕರಣ ಮರದ ಹಲಗೆಗಳು ಮರಮುಟ್ಟು ವ್ಯಾಪಾರ
★ ಆಟೋ ಬಿಡಿಭಾಗಗಳ ವ್ಯಾಪಾರ
★ ಜನರಲ್ ಸ್ಟೋರ್ಸ್ : ಮನಿಯಾರಿ
★ ಪಾದರಕ್ಷೆಗಳ ಅಂಗಡಿ
★ ಫೋಟೋ ಸ್ಟುಡಿಯೋ
★ ಕೀಟನಾಶಕಗಳು: ರಸಗೊಬ್ಬರಗಳು:ಜಾನುವಾರು ಮೇವು
★ ಸೆಣಬಿನ ಚೀಲಗಳ ಅಂಗಡಿ
★ ಸಿಗರೇಟು:ಬೀಡಾ: ಬೀಡಿ ಅಂಗಡಿ

ಸೇವೆ :

★ ಆಟೋರಿಕ್ಷಾ:ರಿಕ್ಷಾಸರ್ವೀಸಿಂಗ್
★ ಟಿ.ವಿ. : ರೇಡಿಯೋ : ಎಲೆಕ್ಟ್ರಿಕ್ ವಸ್ತುಗಳ ದುರಸ್ತಿ: ಕ್ಯಾಸೆಟ್ ರೆಕಾರ್ಡಿಂಗ್
★ ಫೋಟೋಸ್ಟಾಟ್ : ಜೆರಾಕ್ಸ್ ಮಾಡುವುದು: ಬೆರಳಚ್ಚು ಮಾಡುವುದು
★ ಡ್ರೈ ಕ್ಲೀನಿಂಗ್ ಮತ್ತು ಡಾರ್ನಿಂಗ್
★ ಹೇರ್ ಡ್ರೆಸರ್ಸ್ ಬ್ಯೂಟಿ ಪಾರ್ಲರ್
★ ಟೈರ್‌ಟ್ಯೂಬ್ ದುರಸ್ತಿ : ವಲ್ಕನೈಸಿಂಗ್:ಏರ್‌ಕಂಪ್ರೆಸ್ಸರ್
★ ಲೇತ್:ಜಾಬಿಂಗ್: ದುರಸ್ತಿ ಕಾರ್ಯಾಗಾರ
★ ಆಟೋ/ಸೈಕಲ್ ದುರಸ್ತಿ : ಬ್ಯಾಟರಿ ಮತ್ತು ವೆಲ್ಡಿಂಗ್: ಲೆಡ್ ರಿಕವರಿ
★ ಇಲೆಕ್ಟ್ರಿಕ್ ಫಿಟ್ಟಿಂಗ್ : ಮೋಟಾರ್ ವೈಂಡಿಂಗ್: ಕೂಲರ್ ದುರಸ್ತಿ
★ ಮೆಡಿಕಲ್ ಕ್ಲಿನಿಕ್: ಪ್ರಾಕ್ಟೀಸ್
★ ಸರ್ವೀಸ್ ಸ್ಟೇಷನ್: ಡೀಸಲ್ ಪಂಪ್ ಟೆಸ್ಟಿಂಗ್
★ ಗಡಿಯಾರ ದುರಸ್ತಿ

★ ಬಾಕ್ಸಿಂಗ್ ವರ್ಕ್ಸ್ (ಪ್ಯಾಕೇಂಜಿಂಗ್)

★ ವಿಡಿಯೋ ಸೆಂಟರ್

★ ಬ್ಯಾಟರಿ ಚಾರ್ಜಿಂಗ್

★ ಬೆರಳಚ್ಚು ಮಾಡುವುದು ಮತ್ತು ನಕಲು (ಪ್ರತಿ) ತೆಗೆಯುವ ಕೆಲಸ

★ ಸ್ಕೂಟರ್ ದುರಸ್ತಿ

★ ಸೈನ್ ಬೋರ್ಡ್ ಪೈಂಟಿಂಗ್

ಸ್ವಂತ ಉದ್ಯೋಗ ಸ್ಥಾಪಿಸಿ ಸುಖಸಮೃದ್ಧಿ ಸಾಧಿಸಿ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:

ಜಿಲ್ಲಾ/ತಾಲ್ಲೂಕು ಕೈಗಾರಿಕಾ ಕೇಂದ್ರಗಳು

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಕರ್ನಾಟಕ ಸರ್ಕಾರ

ಹಾಸ್ಟಲ್ ಪ್ರಾರಂಭಿಸುವ ಬಗ್ಗೆ

395 - ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಮ್ಯಾಕಲಮರ್ಡಿ ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆ ಇರುವ ಸಂಗತಿ ನಿಜವೇ?

ಆ) ಈ ಶಾಲೆಯ ವಿದ್ಯಾರ್ಥಿಗಳಿಗೆ ಯಾವುದೇ ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ವಸತಿನಿಲಯ ಇಲ್ಲದೆ ಇರುವ ಸಂಗತಿ ನಿಜವೇ?

ಇ) ಹಾಗಿದ್ದಲ್ಲಿ, ಈ ಗ್ರಾಮದಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮೆಟ್ರಿಕ್‌ಪೂರ್ವ ಬಿಸಿಎಂ ವಿದ್ಯಾರ್ಥಿ ವಸತಿನಿಲಯ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಹೌದು.

ಇ) ಅಗತ್ಯತೆ ಹಾಗೂ ಇಲಾಖೆಯ ಆಯವ್ಯಯದಲ್ಲಿ ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯಗಳ ಪ್ರಾರಂಭಕ್ಕಾಗಿ ಒದಗಿಸಲಾಗುವ ಹಣದ ಆಧಾರದ ಮೇಲೆ ವಿದ್ಯಾರ್ಥಿನಿಲಯದ ಪ್ರಾರಂಭಿದ ಬಗ್ಗೆ ಪರಿಶೀಲಿಸಲಾಗುವುದು.